ಶಿವಮೊಗ್ಗದಲ್ಲಿ ನೆಡುತೋಪು ಬೆಳೆಸುವ ಬಗ್ಗೆ.

1674 (2005) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯ ಅರಣ್ಯಾಭಿವೃದ್ಧಿ ನಿಗಮದ ಶಿವಮೊಗ್ಗದಲ್ಲಿ (ನೀಲಗಿರಿ) ವಿಭಾಗದಲ್ಲಿ 2001 ನೇ ಸಾಲಿಗೆ ಎಷ್ಟು ಹೆಕ್ಟೇರ್ ನೆಡುತೋಪು ಬೆಳೆಸಲು ಯೋಜಿಸಿದೆ;

ಆ) ಇದಕ್ಕಾಗಿ ಎಷ್ಟು ಗಿಡಗಳನ್ನು ಬೆಳೆಸಲು ಮಂಜೂರಾತಿ ನೀಡಿದೆ;

ಇ) ಇದಕ್ಕಾಗಿ ಎಷ್ಟು ಪಾಲಿಥಿನ್ ಚೀಲ (ನರ್ಸರಿಗಾಗಿ) ಖರೀದಿಸಿದೆ ಮತ್ತು ಇದಕ್ಕೆ ಖರ್ಚು ಮಾಡಿದ ಹಣ ಎಷ್ಟು;

ಈ) ಕೆ.ಎಫ್.ಐ.ಸಿ.ಯಲ್ಲಿ ಈ ಚೀಲ ತೆಗೆದುಕೊಳ್ಳಬೇಕೆಂಬ ನಿಯಮ ಇರುವುದು ನಿಜವೆ: ಮೇಲ್ಕಂಡ ಚೀಲಗಳನ್ನು ಎಲ್ಲಿಂದ ಖರೀದಿಸಲಾಗಿದೆ?

ಅ) 490 ಹೆಕ್ಟೇರು

ಆ) 7.85 ಲಕ್ಷ ಗಿಡಗಳು.

ಇ) ಮೆದುಮರ ಸಸಿಗಳನ್ನು ಬೆಳೆಸಲು - 6534 ಕೆ.ಜಿ.ಪಾಲಿಥಿನ್ ಚೀಲಗಳು

ಮಾರಿಯಾಳ ಬಿದಿರು ಸಸಿಗಳನ್ನು ಬೆಳೆಸಲು - 35000 ಪಾಲಿಥಿನ್ ಚೀಲಗಳು.

ವೆಚ್ಚ - ರೂ.6,50,964.00

ಈ) ಇಲ್ಲ.

ಪಾಲಿಥಿನ್ ಚೀಲಗಳನ್ನು ಅತಿ ಕಡಿಮೆ ಕೊಟೇಶನ್ ದರದಂತೆ ಮೆ: ಸಾಯಿ ಪ್ಯಾಕೇಜರ್ಸ್, ಬೆಳಗಾಂ ಇವರಿಂದ ಖರೀದಿಸಲಾಗಿದೆ.

ಟಿ.ನರಸೀಪುರ ನಂಜನಗೂಡು ರಸ್ತೆ ದುರಸ್ತಿ

1675 (2427) ಡಾ ಭಾರತಿ ಶಂಕರ್ (ಟಿ.ನರಸೀಪುರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಟಿ.ನರಸೀಪುರ - ನಂಜನಗೂಡು ರಸ್ತೆ ಅತ್ಯಂತ ಕೆಟ್ಟಿದ್ದು (TNT) ದಿನಂಪತ್ರಿ ಸಾವಿರಾರು ವಾಹನಗಳು ತಿರುಗಾಡುವ M.D.R.ರಸ್ತೆಯಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆ ಕಾಮಗಾರಿಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಅಂದಾಜು ವೆಚ್ಚ ಎಷ್ಟು;

ಇ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಎಷ್ಟು ಕಾಲಾವಕಾಶ ಬೇಕು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು).

ಅ) ಟಿ.ನರಸೀಪುರ - ನಂಜನಗೂಡು ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ನೀರಾವರಿ ಪ್ರದೇಶದಲ್ಲಿ ಹಾದು ಹೋಗುತ್ತಿದ್ದು, ರಸ್ತೆಯು ಹಲವೆಡೆ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಇದೆ. ಅಂದಾಜು ವೆಚ್ಚ 180.00 ಲಕ್ಷ ರೂ.ಗಳು.

ಇ) ಅನುದಾನದ ಲಭ್ಯತೆಯ ಮೇರೆಗೆ ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದು.

ಧಾರವಾಡದ ಯಾತ್ರಾ ನಿವಾಸದ ಕಟ್ಟಡ

1676 (2194) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಧಾರವಾಡದಲ್ಲಿನ ಯಾತ್ರಿ ನಿವಾಸದ ಕಟ್ಟಡವನ್ನು ನಿರ್ಮಿಸುವ ಕಾಮಗಾರಿಯು ಎಂದಿನಿಂದ ಪ್ರಾರಂಭಿಸಿ ಮುಕ್ತಾಯ ಗೊಳಿಸಲಾಗುವುದು; ಇದಕ್ಕಾಗಿ ಆಯವ್ಯಯದಲ್ಲಿ ಮೀಸಲಿಟ್ಟ ಹಣವೆಷ್ಟು;

ಆ) ಸದರಿ ಕಟ್ಟಡದ ನಿರ್ಮಾಣ ಕಾರ್ಯ ಈಗಾಗಲೇ ಪ್ರಾರಂಭವಾಗಿದ್ದರೆ, ಈಗ ಅದು ಯಾವ ಹಂತದಲ್ಲಿದೆ;

ಇ) ಈ ಕಟ್ಟಡದಲ್ಲಿ ಪ್ರವಾಸಿಗರಿಗಾಗಿ ಯಾವ ಯಾವ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ? ಇದರ ಕೊಠಡಿಗಳಿಗೆ ವಿಧಿಸಲು ಉದ್ದೇಶಿಸಿರುವ ಬಾಡಿಗೆ ಎಷ್ಟು? (ಪೂರ್ಣ ವಿವರ ಒದಗಿಸುವುದು)

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು).

ಅ) ಧಾರವಾಡದ ಯಾತ್ರಿ ನಿವಾಸ ಕಟ್ಟಡದ ಕೆಲಸವನ್ನು 1994-95ನೇ ಸಾಲಿನಲ್ಲಿ ಪ್ರಾರಂಭಿಸಿದ್ದು, ಇಷ್ಟರಲ್ಲೇ ಕಟ್ಟಡವನ್ನು ಇಲಾಖೆಯ ಸ್ವಾಧೀನಕ್ಕೆ ಪಡೆದುಕೊಂಡು ಪ್ರಾರಂಭೋತ್ಸವವನ್ನು ಆಚರಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಇದಕ್ಕೆ ತಗುಲಿರುವ ವೆಚ್ಚ ಸುಮಾರು ರೂ.75.00 ಲಕ್ಷಗಳು.

ಆ) ಕಟ್ಟಡದ ನಿರ್ಮಾಣ ಪೂರ್ಣಗೊಂಡಿದೆ.

ಇ) ಈ ಯಾತ್ರಿ ನಿವಾಸದಲ್ಲಿ ಪ್ರವಾಸಿಗರಿಗೆ ತಂಗಲು ಪ್ರತ್ಯೇಕ ಕೋಣೆಗಳು, ಡಾರ್ಮಿಟರಿ, ಸ್ನಾನ ಗೃಹಗಳನ್ನೊಳಗೊಂಡ ಶೌಚಾಲಯ ವ್ಯವಸ್ಥೆ ಭೋಜನಾಲಯ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

ಸದರಿ ಸೌಲಭ್ಯದ ನಿರ್ವಹಣೆಯನ್ನು ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರಿಗೆ ವಹಿಸಿಕೊಡಲಾಗುವುದು. ಬಾಡಿಗೆದರ ಇತ್ಯಾದಿಗಳನ್ನು ಸದರಿ ಸಂಸ್ಥೆಯ ನಿಯಮಾವಳಿ ಪ್ರಕಾರ ವಿಧಿಸಲಾಗುವುದು.